# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 94 |
| ಉತ್ತರಿಸಬೇಕಾದ ದಿನಾಂಕ | : | 05.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ "ಅಮೃತ್ ಮಹಲ್" ಯೋಜನೆಗೆ ಮೀಸಲಿಟ್ಟ ಒಟ್ಟು ಜಮೀನು ಎಷ್ಟು; ಈ ಜಮೀನು ಕೆಲವರಿಂದ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಜಮೀನನ್ನು ತೆರವುಗೊಳಿಸಿ "ಅಮೃತ್ ಮಹಲ್" ಯೋಜನೆಯನ್ನು ಅಭಿವೃದ್ಧಿ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ;</td><td>ಅಮೃತ್ ಮಹಲ್ ತಳಿ ಸಂವರ್ಧನೆಗಾಗಿ ಚಿಕ್ಕಮಗಳೂರು ಜಿಲ್ಲೆಯ ಒಟ್ಟು 14339.37 ಎಕರೆ ವಿಸ್ತೀರ್ಣ ಮೀಸಲಿರಿಸಿದೆ.
<table>
<tr><th>ಜಿಲ್ಲೆ</th><th>ಕಾವಲುಗಳ ಸಂಖ್ಯೆ</th><th>ವಿಸ್ತೀರ್ಣ (ಎಕರೆಗಳಲ್ಲಿ)</th><th>ಅಂದಾಜು ಒತ್ತುವರಿ ವಿಸ್ತೀರ್ಣ(ಎಕರೆಗಳಲ್ಲಿ)</th></tr>
<tr><td>ಚಿಕ್ಕಮಗಳೂರು</td><td>13</td><td>14339.37</td><td>4514.10</td></tr>
</table>
<br>ಸದರಿ ಜಮೀನು ಕೆಲವರಿಂದ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
<br><br>ಚಿಕ್ಕಮಗಳೂರು ಜಿಲ್ಲೆಯ ಅಮೃತ್ ಮಹಲ್ ಕಾವಲುಗಳಲ್ಲಿ ಅಂದಾಜು 4514.10 ಎಕರೆ ಪ್ರದೇಶವು ಒತ್ತುವರಿಯಾಗಿರುತ್ತದೆ.
<br><br>ಅಮೃತ್ ಮಹಲ್ ಕಾವಲು ಜಮೀನುಗಳ ಒತ್ತುವರಿ ತೆರವುಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ 61: ಎಲ್.ಜಿ.ಎ 2017: ಬೆಂಗಳೂರು, ದಿನಾಂಕ:02.01.2018 ರಂತೆ ಉಪ ವಿಭಾಗಾಧಿಕಾರಿಗಳ ನೇತೃತ್ವದ ವಿಶೇಷ ಕಾರ್ಯಪಡೆಯನ್ನು (Special Task Force for Eviction of encroachment of amruth mahal kaval land) ರಚಿಸಿ ಕ್ರಮವಹಿಸಲಾಗಿದೆ.
<br><br>ಒತ್ತುವರಿ ಗುರುತಿಸಿ ತೆರವುಗೊಳಿಸುವ ಸಂಬಂಧ ಸಮಿತಿ ಸಭೆಗಳನ್ನು ಆಗಿಂದಾಗ್ಗೆ ಆಯೋಜಿಸಲಾಗುತ್ತಿದೆ. ಸರ್ವೆ ಕಾರ್ಯ ಜಾರಿಯಲ್ಲಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ w.p.No.46528/2016ರಲ್ಲಿನ ನಿರ್ದೇಶನದಂತೆ ಬಾಸೂರು ಕಾವಲಿನ 41 ಎಕರೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.
<br><br>ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಮೃತ್ ಮಹಲ್ ತಳಿ ಸಂರಕ್ಷಣೆಗಾಗಿ 05 ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
<table>
<tr><th>ಕ್ರ ಸಂ</th><th>ಕೇಂದ್ರದ ಹೆಸರು</th></tr>
<tr><td>1</td><td>ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಅಜ್ಜಂಪುರ</td></tr>
<tr><td>2</td><td>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಲಿಂಗದಹಳ್ಳಿ</td></tr>
<tr><td>3</td><td>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬೀರೂರು</td></tr>
<tr><td>4</td><td>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿಳುವಾಲ</td></tr>
<tr><td>5</td><td>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಾಸೂರು</td></tr>
</table></td></tr>
</table>

ಅಮೃತ್ ಮಹಲ್ ತಳಿಸಂವರ್ಧನೆ ಉಪಕೇಂದ್ರ, ಅಂಗದಹಳ್ಳಿ, ಚಿಕ್ಕಮಗಳೂರು ಜಿಲ್ಲೆ ಇಲ್ಲಿ 2017–18ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯಡಿ **"ಅಮೃತ್ ಮಹಲ್ ಗೋಕುಲ ಗ್ರಾಮ"** ಸ್ಥಾಪನೆ ಮಾಡಲು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.250.00 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

2020–21ನೇ ಸಾಲಿನಲ್ಲಿ ಅಮೃತ್ ಮಹಲ್ ರಾಸುಗಳ ಸಂವರ್ಧನೆ ಹಾಗೂ ಸಂರಕ್ಷಣೆಗಾಗಿ ಬಿಳುವಾಲ ಅಮೃತ್ ಮಹಲ್ ಕಾವಲಿನಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಒಟ್ಟು ರೂ.333.36 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

2019–20ನೇ ಸಾಲಿನಲ್ಲಿ ಬಾಸೂರು ಉಪ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರೂ.70.00 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

ಆ) ಈ **"ಅಮೃತ್ ಮಹಲ್"** ಯೋಜನೆಗೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಿಬ್ಬಂದಿಗಳ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? (ವಿವರ ಒದಗಿಸುವುದು)

ಅಮೃತ್ ಮಹಲ್ ತಳಿ ಸಂವರ್ಧನೆಗಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 5 ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಕೇಂದ್ರಗಳ ಹುದ್ದೆಗಳ ವಿವರಗಳು ಈ ಕೆಳಗಿನಂತಿವೆ

| ಕ್ರಸಂ | ಪದನಾಮ | ಮಂಜೂರಾತಿ ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1 | ಉಪ ನಿರ್ದೇಶಕರು | 1 | 1 | 0 |
| 2 | ಸಹಾಯಕ ಕೃಷಿ ಅಧಿಕಾರಿ | 1 | 0 | 1 |
| 3 | ಮುಖ್ಯ ಪಶುವೈದ್ಯಾಧಿಕಾರಿಗಳು | 4 | 3 | 1 |
| 4 | ಜಾನುವಾರು ಅಭಿವೃದ್ಧಿ ಅಧಿಕಾರಿ | 1 | 1 | 0 |
| 5 | ಅಧೀಕ್ಷಕರು | 1 | 1 | 0 |
| 6 | ಪಶುವೈದ್ಯಕೀಯ ಪರೀಕ್ಷಕರು | 6 | 6 | 0 |
| 7 | ಪ್ರಥಮ ದರ್ಜೆ ನೌಕರರು | 2 | 2 | 0 |
| 8 | ದ್ವಿತೀಯ ದರ್ಜೆ ನೌಕರರು | 3 | 3 | 0 |
| 9 | ಬೆರಳಚ್ಚುಗಾರರು | 1 | 0 | 1 |
| 10 | ವಾಹನ ಚಾಲಕರು | 6 | 0 | 6 |
| 11 | ಡಿ ದರ್ಜೆ ನೌಕರರು | 67 | 0 | 67 |
| | ಒಟ್ಟು | 93 | 17 | 76 |

ಒಟ್ಟು 76 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಖಾಲಿ ಹುದ್ದೆಗಳ ಪೈಕಿ 52 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ.

**ಇ–ಪಸಂಮೀ 106 ಸಲೆವಿ 2023**

**(ಕೆ.ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**